1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,
ಚಿಕ್ಕಮಗಳೂರು

<u>ಸ್ಪೆಷಲ್ ಮೊಕದ್ದಮೆ ಸಂಖ್ಯೆಃ 83/2018</u>

| | | | |
|---|---|---|---|
| ಸಾಕ್ಷಿದಾರರ ಹೆಸರು | ಅಜಯ್ ಕುಮಾರ್ | ಪಿ.ಡಬ್ಲ್ಯೂ | 7 |
| ತಂದೆಯ ಹೆಸರು | ಶಂಭು | ಸಿ.ಡಬ್ಲ್ಯೂ | 9 |
| ವಯಸ್ಸು | 35 ವರ್ಷ | | |
| ಉದ್ಯೋಗ | ಕೂಲಿ | | |
| ವಾಸಸ್ಥಳ | ಉಜ್ಜಿನಿ, ಖಾಂಡ್ಯ. | | |

ದಿಃ 21-02-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

1. ಚಾಸಾ.1 ಹಾಗೂ ಚಾಸಾ.8 ರವರು ಗೊತ್ತು.
2. ಈಗ ನೋಡುತ್ತಿರುವ ನೋಟೀಸು ಮತ್ತು ನಿಶಾನೆ ಪಿ.5 ಮಹಜರ್ ರಲ್ಲಿ ನನ್ನ ಸಹಿ ಇರುತ್ತದೆ. ಸದರಿ ನೋಟೀಸನ್ನು ನಿಪಿ.7 ಎಂದು ಹಾಗೂ ಅದರ ಮೇಲೆ ಸಾಕ್ಷಿ ಗುರುತಿಸಿದ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ನಿಪಿ. 5 ರ ಮೇಲೆ ಸಾಕ್ಷಿ ಗುರುತಿಸಿದ ಸಹಿಯನ್ನು ನಿಶಾನೆ ಪಿ.(5(ಬಿ) ಎಂದು ಗುರುತಿಸಲಾಯಿತು. ಚಾಸಾ.1 ರವರು ತೋರಿಸಿದ ಸ್ಥಳಗಳಲ್ಲಿ ಖಾಂಡ್ಯ ಆರ್ಚ್ ಮತ್ತು ಉಜ್ಜಿನಿ ಹತ್ತಿರ ಸಹಿ ಮಾಡಿರುತ್ತೇನೆ. ಚಾಸಾ.1 ರವರಿಗೆ ಹಲ್ಲೆ ಮಾಡಿದ ಸಂಬಂಧ ಮಹಜರ್ ಮಾಡಿರುತ್ತಾರೆ. ಖಾಂಡ್ಯ ಆರ್ಚ್ ಬಳಿ ಮಹಜರನ್ನು ಮಧ್ಯಾಹ್ನ 3-30 ಯಿಂದ 5-00 ಗಂಟೆ ತನಕ ಬರೆದಿರುತ್ತಾರೆ. ಉಜ್ಜಿನಿ ಬಸ್ಟ್ಯಾಂಡ್ ಹತ್ತಿರ 3-00

ಗಂಟೆಯಿಂದ 4-00 ತನಕ ಮಹಜರ ಬರೆದಿರುತ್ತಾರೆ.

3. ಈಗ ನೋಡುತ್ತಿರುವ ಫೋಟೋದಲ್ಲಿ ನನ್ನ, ಚಾಸಾ.1 ಹಾಗೂ ಚಾಸಾ. 8 ರವರ ಇರುವಿಕೆ ಕಂಡು ಬರುತ್ತದೆ. ಸದರಿ ಫೋಟೋವನ್ನು ನಿಪಿ. 8 ಎಂದು ಗುರುತಿಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ ಎಸ್ ಟಿ ವಕೀಲರಿಂದಃ</u>

4. ನಾನು ಚಾಸಾ. 1 ರವರು ಆತ್ಮೀಯರು ಎಂದರೆ ಪರಿಚಯ ಮಾತ್ರ ಎನ್ನುತ್ತಾರೆ. ಬಾಳೆಹೊನ್ನೂರು ಪೋಲೀಸ್ ಠಾಣೆಯಲ್ಲಿ ನನ್ನ ನೆಂಟರಿಷ್ಟರು ಇಲ್ಲ. ಮಹಜರ್ ಗೆ ಬರುವಂತೆ ಚಾಸಾ.1 ರವರು ಕೆರದಿದ್ದರು. ನಾನು ಹೋಗುವ ಮೊದಲೇ ಪೋಲೀಸರು ಸ್ಥಳದಲ್ಲಿ ಇದ್ದರು ಮತ್ತು ಬರವಣಿಗೆ ಮಾಡುತ್ತಿದ್ದರು. ನಿಪಿ. 5 ರ ಮಹಜರನಲ್ಲಿ ಬರೆದಿರುವ ಮಾಹಿತಿ ಹೇಳಲು ಆಗುವುದಿಲ್ಲ ಹಾಗೂ ಗಲಾಟೆ ಬಗ್ಗೆ ಬರೆದಿರುತ್ತಾರೆ. ಗಲಾಟೆ ಜಾಗದಲ್ಲಿ ಬಟ್ಟೆ ಮತ್ತು ಪರ್ಸ್ ಬಿದ್ದಿತ್ತು ಎಂದು ಹಾಗೂ ಅದರ ವಿವರಗಳನ್ನು ಬರೆದಿರುತ್ತಾರೆ. ಸದರಿ ಬಟ್ಟೆ ಮತ್ತು ಪರ್ಸನ್ನು ಪೋಲೀಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಬಟ್ಟೆ ಮತ್ತು ಪರ್ಸನ್ನು ಅಮಾನತು ಪಡಿಸಿದಾಗ ಬರೆದ ಮಹಜರಿಗೆ ಮಾತ್ರ ಸಹಿ ಮಾಡಿರುತ್ತೇನೆ ಬೇರೆ ಮಹಜರಿಗೆ ಸಹಿ ಮಾಡಿರುವುದಿಲ್ಲ. ಸ್ಥಳದಲ್ಲಿ 2 ಅಥವಾ 3 ಸಹಿಗಳನ್ನು ಮಾಡಿರುತ್ತೇನೆ. ಮಹಜರ ಅಲ್ಲದೇ ಇನ್ನೊಂದು ದಾಖಲೆಯಲ್ಲಿ ಸಹಿ ಪಡೆದಿದ್ದರಲ್ಲಿ ಏನು ಬರೆದಿದ್ದೆ ಎಂದು 6 ವರ್ಷಗಳು ಆಗಿರುವ ಕಾರಣ ನೆನಪಿಲ್ಲ. ಫೋಟೋವನ್ನು ಯಾವ ಉದ್ದೇಶಕ್ಕಾಗಿ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

5. ಚಾಸಾ. 1 ರವರು ತೋರಿಸಿದ ಸ್ಥಳದಲ್ಲಿ ಮಹಜರ ಮಾಡಿದ್ದಾರೆ ಎನ್ನುವುದು

ಸುಳ್ಳು ಎಂದರೆ ಸರಿಯಲ್ಲ. ನಿಪಿ. 5 ರಲ್ಲಿ ಮಾಹಿತಿ ಗೊತ್ತಿಲ್ಲ ಎಂದರೆ 6 ವರ್ಷ ಆಗಿರುವ ಕಾರಣ ಮರೆತು ಹೋಗಿದೆ ಎನ್ನುತ್ತಾರೆ.

6. ನನ್ನ ಸಮಕ್ಷಮ ಯಾವುದೇ ಮಹಜರು ಮಾಡದಿದ್ದರೂ ಚಾಸಾ.1 ರವರು ಆತ್ಮೀಯರು ಆದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ
ಸಹಿ/-
(ಬಿ.ಪುಷ್ಪಾಂಜಲಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.